Received on 28/1/2021
NUP.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/44/ಸಸೂ/ಬಸ್ಥಾವಿ/2020–21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 28.01.2021

## ಸುತ್ತೋಲೆ

ವಿಷಯ: ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿಯಡಿಯಲ್ಲಿ ಉನ್ನತ (Higher)ಎ.ಜಿ.ಪಿ. ರೂ.9000/– ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/51/ಎಜಿಪಿ/2015–16/ ಬಸ್ಥಾವಿ, ದಿನಾಂಕ : 14.07.2017.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಯ ವೇತನ ಶ್ರೇಣಿ ರೂ.37400–67000 ರಲ್ಲಿ ರೂ.9000/– ಎ.ಜಿ.ಪಿ. ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರ ಹಂತದ ಪದೋನ್ನತಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಿಯಮಗಳಡಿಯಲ್ಲಿ ಕ್ರಮಕೈಗೊಳ್ಳಲು ಈ ಇಲಾಖೆಯ ಹಂತದಲ್ಲಿ ಈ ಕೆಳಕಂಡಂತೆ ವೃತ್ತಿ ಪದೋನ್ನತಿ ಪರಿಶೀಲನಾ ಸಮಿತಿಯನ್ನು ಈ ಕಛೇರಿ ದಿನಾಂಕ :19.01.2016ರ ಸುತ್ತೋಲೆಯಲ್ಲಿ (Placement Committee) ರಚಿಸಲಾಗಿದೆ.

| | | | |
|---|---|---|---|
| 1. | ಕಾಲೇಜು ಶಿಕ್ಷಣ ನಿರ್ದೇಶಕರು | – | ಅಧ್ಯಕ್ಷರು |
| 2. | ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು | – | ಸದಸ್ಯರು |
| 3. | ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು (ಶೈಕ್ಷಣಿಕ) | – | ಸದಸ್ಯರು |
| 4. | ಕಾಲೇಜು ಶಿಕ್ಷಣ ಸಹಾಯಕ ನಿರ್ದೇಶಕರು | – | ಸದಸ್ಯರು |

ಆದುದರಿಂದ, ರೂ.9000/– ಎ.ಜಿ.ಪಿ. ಮಂಜೂರು ಮಾಡುವ ಸಂಬಂಧ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಖಾಸಗಿ ಅನುದಾನಿತ ಪದವಿ ಹಾಗೂ ಶಿಕ್ಷಣ ಕಾಲೇಜಿನ ಸಹಾಯಕ ಪ್ರಾಧ್ಯಾಪಕರುಗಳಿಗೆ ಕೇಂದ್ರ ಕಛೇರಿಯ ಮಾನ್ಯ ನಿರ್ದೇಶಕರ ಕೊಠಡಿಯಲ್ಲಿ ದಿನಾಂಕ: 05.02.2021ರ 11:30 ಪೂರ್ವಾಹ್ನ ಏರ್ಪಡಿಸಿರುವ ಸಂದರ್ಶನಕ್ಕೆ ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗಬೇಕೆಂದು ತಿಳಿಸಲಾಗಿದೆ.

1) ನೇಮಕಾತಿ ಆದೇಶದ ಪ್ರತಿ.

2) ಎಂ.ಫಿಲ್/ಪಿಹೆಚ್.ಡಿ.(Notification)/ಎಸ್.ಎಲ್.ಇ.ಟಿ./ನೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಮೂಲ ದಾಖಲೆಗಳು.

3) ಹಿರಿಯ ವೇತನ ಶ್ರೇಣಿ (ರೂ.7000/-) ಹಾಗೂ ರೂ.8000/- ಎ.ಜಿ.ಪಿ. ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳು.

4) ರೂ.8000/- ಆಯ್ಕೆ ವೇತನ ಶ್ರೇಣಿ ಮಂಜೂರಾದ ನಂತರ ಪೂರೈಸಿರುವ 01 ವಾರದ ತರಬೇತಿಗಳ ಬಗ್ಗೆ ಮೂಲ ದಾಖಲೆಗಳು.

5) ISSN/ISBN ಪ್ರಕಟಣೆಗಳು Ph.D ಪದವಿ ಪಡೆದವರು 01, M.Phil ಪದವಿ ಪಡೆದವರು 02 ಹಾಗೂ ಅನ್ಯರು 03 ತಾವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಪ್ರಕಟಣೆಗಳ ಮೂಲ ದಾಖಲೆಗಳು.

6) ಎ.ಪಿ.ಐ. ಸ್ಕೋರಿಂಗ್‌ಗೆ ಸಂಬಂಧಿಸಿದಂತಹ ದಾಖಲೆಗಳು ಹಾಗೂ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಪ್ರತಿ.

7) ಯಾವುದೇ ಶಿಸ್ತು ಪ್ರಕರಣ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿ.

**ವಿ.ಸೂ.: ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.**

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**ಇವರಿಗೆ:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಧಾರವಾಡ, ಕಲಬುರಗಿ, ಹಾಗೂ ಶಿವಮೊಗ್ಗ-ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳ ಗಮನಕ್ಕೆ ತರಲು ತಿಳಿಸಲಾಗಿದೆ.

2) ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.

ರೂ.9000/- ಎ.ಜಿ.ಪಿ. ಕೋರಿರುವ ಖಾಸಗಿ ಅನುದಾನಿತ ಕಾಲೇಜುಗಳು ಸಹಾಯಕ ಪ್ರಾಧ್ಯಾಪಕರುಗಳ ಪಟ್ಟಿ (ಸಂದರ್ಶನಕ್ಕೆ ಹಾಜರಾಗಬೇಕಾದ ದಿನಾಂಕ: 05/02/2021ರ 11:30 ಪೂರ್ವಾಹ್ನ)

| ಕ್ರ. ಸಂ. | ಸಹಾಯಕ ಪ್ರಾಧ್ಯಾಪಕರ ಹೆಸರು (ಶ್ರೀ/ಶ್ರೀಮತಿ) | ಬೋಧನಾ ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ಹೆಸರು |
|---|---|---|---|
| 1 | 2 | 3 | 4 |
| 1 | ಡಾ. ರಾಜಶೇಖರ ವಿ ಬೀರನಳ್ಳಿ | ಅರ್ಥಶಾಸ್ತ್ರ | ಎಂ.ಎಸ್. ಇರಾಣಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಕಲಬುರಗಿ |
| 2 | ಎಸ್. ಲತಾದೇವಿ ಕರಿಕಲ್ | ಸಸ್ಯಶಾಸ್ತ್ರ | ಶರಣಬಸವೇಶ್ವರ ವಿಜ್ಞಾನ ಕಾಲೇಜು, ಕಲಬುರಗಿ |
| 3 | ಡಾ. ಜೆ.ಬಿ. ಸಿದ್ದನಗೌಡ | ಇತಿಹಾಸ | ಕೊಟ್ಟೂರೇಶ್ವರ ಮಹಾವಿದ್ಯಾಲಯ,ಕೊಟ್ಟೂರು |
| 4 | ಬಿ.ಆರ್. ರಾಜು | ಕನ್ನಡ | ಗೋಖಲೆ ಸೆಂಟಿನರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ,ಅಂಕೋಲಾ |
| 5 | ಬಸವರಾಜ. ಹೆಚ್.ಜಿ | ಭೌತಶಾಸ್ತ್ರ | ಆರ್.ಟಿ.ಎಸ್ ಕಾಲೇಜು, ರಾಣೆಬೆನ್ನೂರು |
| 6 | ಬಿ.ಕೆ ಕಾಟೇನಹಳ್ಳಿ | ಪ್ರಾಣಿಶಾಸ್ತ್ರ | ಆರ್.ಟಿ.ಎಸ್ ಕಾಲೇಜು, ರಾಣೆಬೆನ್ನೂರು |
| 7 | ಎಸ್.ಎ ತಿಪ್ಪೇಶ | ಭೌತಶಾಸ್ತ್ರ | ಮಹಾಂತಸ್ವಾಮಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಲಯ, ಹಂಸಭಾವಿ |
| 8 | ಮಂಜುನಾಥ ಮಾಧವ ಪಾಟೀಲ | ಇತಿಹಾಸ | ಗೋಖಲೆ ಸೆಂಟೆನರಿ ಕಾಲೇಜು, ಅಂಕೋಲಾ |
| 9 | ಸೂರ್ಯನಾರಾಯಣ ಎಸ್ ಭಟ್ | ಪ್ರಾಣಿಶಾಸ್ತ್ರ | ಎಂ.ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ |
| 10 | ಡಾ. ಸಿದ್ದಲಿಂಗ ಮೂರ್ತಿ ಎಸ್.ಎಂ | ಸಸ್ಯಶಾಸ್ತ್ರ | ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಕಾಲೇಜು, ಹರಪನಹಳ್ಳಿ |
| 11 | ಸಂಪಿಗೆ ನರಾಯಣ ರಾವ್ ಕೆ | ವಾಣಿಜ್ಯಶಾಸ್ತ್ರ | ಎಂಎಸ್.ಬಿ ಕಲಾ ಮತ್ತು ವಾಣಿಜ್ಯ ಕಾಲೇಜು, ದಾವಣಗೆರೆ |
| 12 | ಡಾ. ಎಂ ಮಂಜುನಾಥ | ಗಣಿತಶಾಸ್ತ್ರ | ಪಿ.ಇ.ಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ |
| 13 | ಮಂಜುಶ್ರೀ ಮೆನನ್ | ಹಿಂದಿ | ಎಂ.ಇ.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು |

ವಿಶೇಷ ಸೂಚನೆ: ಈ ಸುತ್ತೋಲೆಯಲ್ಲಿ ತಿಳಿಸಲಾಗಿರುವ ದಾಖಲಾತಿಗಳನ್ನು ಈಗಾಗಲೇ ಸಲ್ಲಿಸದೇ ಇದ್ದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು ವಿಭಾಗದ ಇ-ಮೇಲ್ ಐಡಿ plapromotion@gmail.com ಗೆ ಸಲ್ಲಿಸಲು ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

File-44-AGP-9000-Circular-2020-21